<u>ದಿನಾಂಕಃ 01-09-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-</u>**

ಪ್ರಮಾಣ ಪತ್ರವನ್ನು ನಾನೇ ಬರೆಸಿದ್ದೇನೆ, ಅದರಲ್ಲಿ ಬರೆದಿರುವ ವಿಚಾರಗಳು ತಿಳಿದಿಲ್ಲ. ವಾದಿಯ ಪರಿಚಯ ಇದೆ, ಅವರು ನನ್ನ ಅತ್ತಿಗೆ ಅಂದರೆ ನನ್ನ ಅಣ್ಣನ ಹೆಂಡತಿ. ನನ್ನ ತಂದೆಯ ಹೆಸರು ಗಿರಿಯಪ್ಪ. ಅವರಿಗೆ ಐದು ಜನ ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು. ಹೆಸರುಗಳನ್ನು ಹೇಳಬಹುದು. ತಿಮ್ಮಪ್ಪ , ಚೌಡಪ್ಪ , ನಾನು, ಗೋವಿಂದಪ್ಪ, ಸಗಣಪ್ಪ, ಲಕ್ಷ್ಮಮ್ಮ, ರತ್ನಮ್ಮ ಮತ್ತು ತಿಮ್ಮಮ್ಮ. ಹೆಣ್ಣು ಮಕ್ಕಳು ಅಂದರೆ ನನ್ನ ಸಹೋದರಿಯರು ಜೀವಂತ ಇದ್ದಾರೆ. ಹೆಣ್ಣು ಮಕ್ಕಳು ಇರುವ ಬಗ್ಗೆ ಈ ತಕರಾರಿನಲ್ಲಿ ತಿಳಿಸಿಲ್ಲ. ನನ್ನ ತಂದೆ ಕೂಡಾ ಬದುಕಿದ್ದಾರೆ. ವಾದಿಯ ಗಂಡ ತೀರಿಕೊಂಡು 7-8 ವರ್ಷ ಆಗಿರಬಹುದು. ವಾದಿ ಮತ್ತು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ದಾವಾ ಸ್ವತ್ತುಗಳು ಎಲ್ಲವೂ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. ವಾದಿಯ ಮದುವೆ ಹಿರಿಯ ಸಮ್ಮುಖದಲ್ಲಿ ಆಗಿದೆ ಎಂದರೆ ಸರಿ. 7 ನೇ ಪ್ರತಿವಾದಿಯ ತಾಯಿಯ ಜೊತೆ ಅನೈತಿಕ ಸಂಬಂಧ ಗೊತ್ತಾದ ನಂತರ ವಾದಿ ಮತ್ತು ಆಕೆಯ ಗಂಡನಾದ ತಿಮ್ಮಪ್ಪನ ನಡುವೆ ವೈಮನಸ್ಸು ಪ್ರಾರಂಭವಾಯಿತು ಎಂದರೆ ಸರಿ. ಎಷ್ಟೇ ಪ್ರಯತ್ನ ಪಟ್ಟರೂ ನಮ್ಮ ನಡುವಳಿಕೆ ಸುಧಾರಿಸದ ಕಾರಣ ವಾದಿ ತನ್ನ ಮಗನೊಂದಿಗೆ ತವರು ಮನೆಗೆ ಹೋದಳು ಎಂದರೆ ಸರಿಯಲ್ಲ. ಅಮರು ತವರು ಮನೆಗೆ ಹೋದ ನಂತರ ತಿಮ್ಮಪ್ಪ 7 ನೇ ಪ್ರತಿವಾದಿಯ ತಾಯಿಯನ್ನು ಮದುವೆ ಆದರೂ ಎಂದರೆ ಸರಿ. ಕರಿಯಮ್ಮನನ್ನು ಎರಡನೇ ಮದುವೆ ಮಾಡಿಕೊಂಡು 30 ವರ್ಷ ಆಗಿರಬಹುದು. ಆ ಸಮಯದಲ್ಲಿ 1 ನೇ ಹೆಂಡತಿಯಾದ ವಾದಿಯ ಮಗ 6 ವರ್ಷದ ಹುಡುಗನಿದ್ದ ಎಂದರೆ ಸಾಕ್ಷಿಯು 3-4 ವರ್ಷ ಎಂದು ಹೇಳುತ್ತಾರೆ. ವಾದಿ ಮತ್ತು ಆಕೆಯ ತವರು ಮನೆಯವರು ರಘುರಾಜ್ ಇತನ ಪಾಲನೆ ಪೋಷಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಅಣ್ಣನೇ ಅರಸಿಕೆರೆಯಲ್ಲಿ ಬಿಟ್ಟು ಓದಿಸಿದ್ದಾರೆ ಎಂದು ಹೇಳುತ್ತಾರೆ. ಅಲ್ಲಿ ಬಾಡಿಗೆ ಮನೆಯಲ್ಲಿ ಇದ್ದರು ಎಂದು ಮಾತ್ರ ನನಗೆ ಗೊತ್ತು, ಹೆಚ್ಚಿನ ವಿಚಾರಗಳು ತಿಳಿದಿಲ್ಲ.

ನನ್ನ ಅಣ್ಣ ತಿಮ್ಮಪ್ಪ ಯಾವುದೇ ನೌಕರಿ ಮಾಡುತ್ತಿರಲಿಲ್ಲ, ಊರಲ್ಲೇ ವ್ಯವಸಾಯ ಮಾಡಿಕೊಂಡಿದ್ದರು. ಬೇರೆ ಮನೆ ಮಾಡಿ ಇಟ್ಟು ಓದಿಸಲು ಸಾಕಷ್ಟು ಅನುಕೂಲ ಇರಲಿಲ್ಲ ಎಂದರೆ ಸರಿಯಲ್ಲ. ತಿಮ್ಮಪ್ಪ ಯಾವುದೇ ಶಿಕ್ಷಣ ಕೊಡಿಸಿಲ್ಲ, ವಾದಿ ಮತ್ತು ಅವರ ತವರು ಮನೆಯವರೇ ಪಾಲನೆ ಪೋಷಣೆ ಮಾಡಿ ಶಿಕ್ಷಣ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ರಘುರಾಜ್ ಇತನು ಜೀವಂತ ಇದ್ದಾಗ ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಆತನು ತನ್ನ ಕಷ್ಟಾರ್ಜಿತದಿಂದ ಬೀರೂರಿನಲ್ಲಿ ಒಂದು ನಿವೇಶನ ಖರೀದಿ ಮಾಡಿದ್ದ ಎಂದರೆ ಸಾಕ್ಷಿಯು ಆತನ ತಂದೆ ಎಲ್ಲರೂ ಸೇರಿ ಖರೀಸಿದ್ದಾರೆ

ಎಂದರೆ ಹೇಳುತ್ತಾರೆ. ಕ್ರಯ ವಿವರಗಳ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಸರ್ಕಾರದಿಂದ ಅನುಮತಿ ಪಡೆದು ರಘುರಾಜ್ ನಿವೇಶನವನ್ನು ಖರೀದಿಸಿದ್ದ ಎಂದರೆ ಸರಿಯಲ್ಲ. ಖರೀದಿ ಮಾತುಕತೆ ಕಾಲಕ್ಕೆ, ಕ್ರಯದ ಕಾಲಕ್ಕೆ ನಾನು ಹಾಜರಿರಲಿಲ್ಲ. ಯಾರು ಹಣ ಕೊಟ್ಟರು, ಯಾವ ಮೂಲದಿಂದ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಇಬ್ಬರೂ ಮಾತನಾಡುತ್ತಿರಬೇಕಾದಾಗ ಮಾತ್ರ ನಾನು ಕೇಳಿದ್ದೇನೆ. ವಾದಿ ತವರು ಮನೆಗೆ ಹೋದ ನಂತರ ಆಕೆ, ಆಕೆಯ ಮಗ ಮತ್ತು ತಿಮ್ಮಪ್ಪ ಇವರೊಂದಿಗೆ ಯಾವುದೇ ರೀತಿ ಸಂಬಂಧಗಳು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ನಿವೇಶನದಲ್ಲಿ ರಘುರಾಜ್ ಮನೆ ಕೂಡಾ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ರಘುರಾಜ್ ಇತನ ಮರಣ ನಂತರ ಆಸ್ತಿ ಆತನ ತಾಯಿಯ ಹೆಸರಿನಲ್ಲಿ ವರ್ಗಾವಣೆ ಆಗಿದೆ ಎಂದರೆ ಸರಿ. ವಾದಿ ತನ್ನ ಮನೆತನದ ಅಡಚಣೆ ಮತ್ತು ಸಾಲ ತಿರುವಳಿಗಾಗಿ ಸದರಿ ನಿವೇಶನವನ್ನು ತನ್ನ ಅಣ್ಣನಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಣ್ಣನ ಎರಡನೇ ಹೆಂಡತಿಯ ಊರು ಮೊಕಿಕೆರೆ ಗ್ರಾಮವೇ ಇರುತ್ತದೆ. ಆಕೆಯು ಈಗ ಗಣಸಿಯಲ್ಲಿ ವಾಸವಿದ್ದಾರೆ. ಆಕೆಯ ಬಗ್ಗೆ ಹೆಚ್ಚಿನ ಮಾಹಿತಿ ಗೊತ್ತಿಲ್ಲ. 7 ನೇ ಪ್ರತಿವಾದಿ ಬೆಂಗಳೂರು, ಅರಸಿಕೆರೆಗಳಲ್ಲಿ ಇರುತ್ತಾನೆ. ಪಂಚಾಯತಿ ಯಾವಾಗ ಆಗಿತ್ತು ಎಂದು ಹೇಳಲು ಆಗುವುದಿಲ್ಲ, ಒಟ್ಟಿನಲ್ಲಿ ದೇವಸ್ಥಾನದ ಮುಂದೆ ಆಗಿತ್ತು. ಆ ಸಮಯದಲ್ಲಿ ಸುಮಾರು ಜನ ಗ್ರಾಮಸ್ಥರು ಮತ್ತು ಗೌಡರು ಇದ್ದರು. ಅವರ ಹೆಸರು ಹೇಳಲು ಬರುವುದಿಲ್ಲ. 1,00,000/- ರೂ.ಗಳ ಪೈಕಿ ನಗದು ರೂಪದಲ್ಲಿ ಕೊಟ್ಟಿದ್ದಾರೆ. ಪಂಚಾಯತಿ ಆದ ಬಗ್ಗೆ ಬರವಣಿಗೆ ಆದ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ್ಲ, ಆದರೆ ಗ್ರಾಮಸ್ಥ ರು ಬರೆದಿರಬಹುದು. ಬರವಣಿಗೆ ಆಗಿದ್ದರೇ ಅದನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇದೆಯೇ ಎಂದರೆ ಸಾಕ್ಷಿ ಇದ್ದರೇ ಕೊಡಬಹುದು ಎನ್ನುತ್ತಾರೆ. ನಾನು ಹೇಳಿದ ದಿನಾಂಕದಂದು ಬರವಣಿಗೆ ಆದ ನಂತರ ವಾದಿಯ ಸಹಿ ಪಡೆದುಕೊಂಡಿದ್ದಾರೆ. ಪತ್ರವನ್ನು ಗ್ರಾಮಸ್ಥರೇ ಇಟ್ಟುಕೊಂಡಿದ್ದಾರೆ. ಈಗ ಪತ್ರ ಯಾರ ಬಳಿ ಇದೆ ಎಂದು ಗೊತ್ತಿಲ್ಲ. ಸದರಿ ವಿಚಾರವನ್ನು ನಾನು ತಕರಾರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ. ಎಲ್ಐಸಿ ಪಾಲಿಸಿಯ ವಿವರಗಳು ನನಗೆ ತಿಳಿದಿಲ್ಲ. ನಾನು ಹೇಳಿದಂತೆ ಯಾವುದೇ ಪಂಚಾಯತಿ ಆಗಿಲ್ಲ, ವಾದಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿ ಅಕ್ರಮ ಲಾಭ ಮಾಡಿಕೊಳ್ಳಲು ನಿವೇಶನವನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅಣ್ಣನಿಗೆ ಹೃದಯ ಸಂಬಂಧಿ ಕಾಯಿಲೆ ಇದ್ದ ಬಗ್ಗೆ ನಾನು ಯಾವುದೇ ದಾಖಲೆ ಕೊಟ್ಟಿಲ್ಲ. ಆತ ಚೆನ್ನಾಗಿಯೇ ಇದ್ದ ಎಂದರೆ ಸರಿಯಲ್ಲ. ವಾದಿ ನಮ್ಮ ಮನಸ್ಸಿಗೆ ನೋವಾಗುವ ಯಾವುದೇ ವ್ಯವಹಾರಗಳನ್ನು ಮಾಡಿಲ್ಲ ನಾವೇ ಆಕೆಗೆ ವಿನಾಕಾರಣ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

ಓ ಎಸ್ 36/2019
ಡಿಡಬ್ಲ್ಯೂ.1

ನಮ್ಮ ಕುಟುಂಬದಲ್ಲಿ ಇವರೆಗೂ ಯಾವುದೇ ವಿಭಾಗ ಆಗಿಲ್ಲ. ನಮ್ಮ ವಕೀಲರಿಗೆ ಈಗ 15 ವರ್ಷಗಳ ಹಿಂದೆ ವಿಭಾಗ ಆದ ಬಗ್ಗೆ ಮಾಹಿತಿ ಕೊಟ್ಟಿಲ್ಲ ಮತ್ತು ಅದನ್ನು ಹೇಳಿ ಬರೆಸಿಲ್ಲ. ಈ ದಾವೆಯಲ್ಲಿ ನಮ್ಮನ್ನು ಪ್ರತಿನಿಧಿಸುವ ವಕೀಲರು ನಮ್ಮದೇ ಊರಿನವರು ಮತ್ತು ಸಂಬಂಧಿಕರು ಎಂದರೆ ಸರಿ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಕೂಡಾ ವಕೀಲರು ಹೇಳಿ ಕೊಟ್ಟಂತೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಎಲ್ಲ ಆಸ್ತಿಗಳಲ್ಲಿ ಭಾಗ ಎಂದರೆ ಸಾಕ್ಷಿಯು ಕಾನೂನಿನ ಅಡಿಯಲ್ಲಿ ಇದ್ದರೆ ತೆಗೆದುಕೊಳ್ಳಲಿ ಎನ್ನುತ್ತಾರೆ. ದಾವಾ ಅನುಸೂಚಿ 7 ನೇ ಸ್ವತ್ತು ಈಗ ವಾದಿಯ ಹೆಸರಿನಲ್ಲಿ ಇದೆ ಎಂದರೆ ನಮ್ಮ ಅಣ್ಣ ತೀರಿಕೊಂಡ ನಂತರ ಮಾಡಿಕೊಂಡಿದ್ದಾರೆ. ಬೀರೂರಿನಲ್ಲಿರುವ ಆಸ್ತಿ ವಾದಿಯ ಮಗನ ಸ್ವಂತ ಆಸ್ತಿ ಇರುವುದರಿಂದ ನಮಗೆ ಅದರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ 7 ನೇ ಪ್ರತಿವಾದಿ ಕಡೂರು ನ್ಯಾಯಾಲಯದಲ್ಲಿ ಬೀರೂರಿನ ಆಸ್ತಿಯ ಬಗ್ಗೆ ಪಾಲು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಅದು ಚಾಲ್ತಿಯಲ್ಲಿದೆ ಎಂದರೆ ಸರಿ. ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ:</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

Sd/-

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***